ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧	ಬೆಂಗಳೂರು, ಗುರುವಾರ, ೨೨, ಜನವರಿ, ೨೦೨೬(ಮಾಘ, ೦೨, ಶಕವರ್ಷ, ೧೯೪೭)	ಸಂಚಿಕೆ ೧೪
Volume - 161	BENGALURU, THURSDAY, 22, JANUARY, 2026(MAGHA, 02, SHAKAVARSHA,, 1947)	Issue 14

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್, ಬೆಂಗಳೂರು ಈ ಸಂಘದ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ :-
1. ಸರ್ಕಾರದ ಆದೇಶ ಸಂಖ್ಯೆ: ಸಿಒ 55 ಸಿಎಸ್ಆರ್ 2023 ಬೆಂಗಳೂರು, ದಿನಾಂಕ:15.03.2024, 21.01.2025 ಮತ್ತು 15.07.2025.
2. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ; ಜಂ.ನಿ/(ಐ.ಸಿ.ಡಿ.ಪಿ)/ಸಂ.ಸಂ-**02/60/2023-24,** ದಿನಾಂಕ: **28.11.2025.**

*****

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ **(1)** ರ ಆದೇಶದಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ **1960**ರ ಕಲಂ **27-ಎ** ರನ್ವಯ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್, ವಿಜ್ಞಾನ ಭವನ, ನಂ.**24/2, 21**ನೇ ಮುಖ್ಯ ರಸ್ತೆ, ಬನಶಂಕರಿ **2**ನೇ ಹಂತ, ಬೆಂಗಳೂರು, ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿ ಆದೇಶಿಸಲಾಗಿತ್ತು. ನಂತರ ಕಾಲಕಾಲಕ್ಕೆ ಅವಧಿಯನ್ನು ವಿಸ್ತರಿಸಲಾಗಿತ್ತು.

ಮೇಲೆ ಓದಲಾದ ಕ್ರಮಾಂಕ **(2)**ರ ಪತ್ರದಲ್ಲಿ ತಿಳಿಸಿರುವಂತೆ ಸಂಘದ ಚುನಾವಣೆಯನ್ನು ನಡೆಸಲು ವಿಭಾಗವಾರು ಅಂತಿಮ ಮತದಾರರ ಪಟ್ಟಿ ಮತ್ತು ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿ, ಬೆಳಗಾವಿ ಮತ್ತು ಕಲ್ಬುರ್ಗಿ ವಿಭಾಗಗಳ ತಲಾ **02** ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದು, ಬೆಂಗಳೂರು ಮತ್ತು ಮೈಸೂರು ವಿಭಾಗಗಳ ಚುನಾವಣೆ ಬಾಕಿ ಇರುತ್ತದೆ. ಚುನಾವಣಾ ಪ್ರಕ್ರಿಯೆ ಚಾಲ್ತಿಯಲ್ಲಿರುವಾಗಲೇ ಸಂಘದ ಸದಸ್ಯರುಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ರಿಟ್ ಅರ್ಜಿ ಸಂಖ್ಯೆ:**16517/2025**ರ ಪ್ರಕರಣದಲ್ಲಿ ಸಂಘದ ಮುಂದಿನ ಚುನಾವಣೆಯ ಪ್ರಕ್ರಿಯೆಗೆ ತಡಯಾಜ್ಞೆಯನ್ನು ನೀಡಿರುವುದರಿಂದ, ಸಂಘದ ಚುನಾವಣೆಯನ್ನು ಮುಂದೂಡಲಾಗಿದೆ. ಸದರಿ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ನೀಡುವ ಮುಂದಿನ ಆದೇಶದಂತೆ ಸಂಘದ ಚುನಾವಣೆಯನ್ನು ನಡೆಸಬೇಕಾಗಿರುವುದರಿಂದ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸುವಂತೆ ಕೋರಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ, ಸಂಘದ ಆಡಳಿತಾಧಿಕಾರಿ ಅವಧಿಯು ದಿನಾಂಕ:**14.09.2025**ಕ್ಕೆ ಮುಕ್ತಾಯಗೊಂಡಿರುವುದರಿಂದ ನಿಬಂಧಕರ ಶಿಫಾರಸ್ಸಿನಂತೆ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ:**15.09.2025** ರಿಂದ ಮುಂದಿನ **06** ತಿಂಗಳ ಅವಧಿಗೆ ವಿಸ್ತರಿಸಲು ಸರ್ಕಾರವು ತೀರ್ಮಾನಿಸಿದೆ, ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಒ **55** ಸಿಎಸ್‌ಆರ್ **2023**

ಬೆಂಗಳೂರು, ದಿನಾಂಕ: **01.01.2026**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ **1960**ರ ಕಲಂ **27-ಎ** ರನ್ವಯ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್, ವಿಜ್ಞಾನ ಭವನ, ನಂ.**24/2, 21**ನೇ ಮುಖ್ಯ ರಸ್ತೆ, ಬನಶಂಕರಿ **2**ನೇ ಹಂತ, ಬೆಂಗಳೂರು ಈ ಸಂಘದ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ:**15.06.2025** ರಿಂದ ಮುಂದಿನ **06** ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕಾಯ್ದೆ ಕಲಂ.**25**ರ ವಿಚಾರಣಾ ವರದಿಯಂತೆ ಸಂಘದಲ್ಲಿನ ನ್ಯೂನತೆಗಳನ್ನು ಸರಿಪಡಿಸಿ, ಸಂಘದ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-**3**,
ಸಹಕಾರ ಇಲಾಖೆ.

PR-17

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಅಖಿಲ ಕರ್ನಾಟಕ ಕೊರಮರ ಸಂಘ, ಬೆಂಗಳೂರು ಸಂಘದ ಆಡಳಿತಾಧಿಕಾರಿಯನ್ನು ಬದಲಾಯಿಸುವ ಬಗ್ಗೆ.

ಓದಲಾಗಿದೆ :-
1) ಸರ್ಕಾರದ ಆದೇಶ ಸಂ. ಸಿಒ 71 ಸಿಎಸ್‌ಆರ್ 2023, ದಿನಾಂಕ: 24.01.2024 ಮತ್ತು **04.09.2025**.
2) ಸರ್ಕಾರದ ಆದೇಶ ಸಂ. ಸಿಒ 71 ಸಿಎಸ್‌ಆರ್ 2023, ದಿನಾಂಕ: **07.11.2025**.
3) ಸಹಕಾರ ಸಂಘಗಳ ಸಹಾಯಕ ನಿಬಂಧಕರು, 3ನೇ ವಲಯ ಇವರ ಪತ್ರ ಸಂಖ್ಯೆ; ಎಆರ್‌ಬಿ-50/ಸಂ.ಸ/05/2025-26, ದಿನಾಂಕ: 25.11.2025.

*****

ಪ್ರಸ್ತಾವನೆ:

ಮೇಲೆ ಓದಲಾದ **(1)** ರ ಆದೇಶದಲ್ಲಿ ಅಖಿಲ ಕರ್ನಾಟಕ ಕೊರಮರ ಸಂಘ, ಮಾವಳ್ಳಿ ಟ್ಯಾಂಕ್ ಬಂಡ್ ರಸ್ತೆ, ಬೆಂಗಳೂರು, ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿ ಆದೇಶಿಸಲಾಗಿತ್ತು. ನಂತರ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸಲಾಗಿತ್ತು.

ಮೇಲೆ ಓದಲಾದ (2)ರ ಪತ್ರದಲ್ಲಿ ಅಖಿಲ ಕರ್ನಾಟಕ ಕೊರಮರ ಸಂಘ, ಬೆಂಗಳೂರು, ಈ ಸಂಘದ ಆಡಳಿತಾಧಿಕಾರಿಯಾಗಿದ್ದ ಮಾರಾಟಾಧಿಕಾರಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, 2ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರನ್ನು ಬದಲಾಯಿಸಿ ಶ್ರೀ. ಹರೀಶ್ ಕುಮಾರ್, ಸಹಕಾರ ಸಂಘಗಳ ಸಹಾಯಕ ನಿಬಂಧಕರು 3ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರನ್ನು ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ (3) ರ ಪತ್ರದಲ್ಲಿ, ಅಖಿಲ ಕರ್ನಾಟಕ ಕೊರಮರ ಸಂಘ ಬೆಂಗಳೂರು ಈ ಸಂಘಕ್ಕೆ ನೇಮಿಸಲಾಗಿರುವ ಆಡಳಿತಾಧಿಕಾರಿಗಳಿಗೆ ಅನಾರೋಗ್ಯ ಹಾಗೂ ಅಧಿಕ ಕಾರ್ಯಭಾರದ ಒತ್ತಡವನ್ನು ಪರಿಗಣಿಸಿ, ಸಂಘದ ಆಡಳಿತಾಧಿಕಾರಿಯನ್ನು ಬದಲಾಯಿಸಿ ಬೇರೊಬ್ಬ ಅಧಿಕಾರಿಯನ್ನು ನೇಮಿಸುವಂತೆ ಕೋರಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಲಾಗಿ, ಸಂಘದ ಆಡಳಿತಾತ್ಮಕ ಹಿತದೃಷ್ಟಿಯಿಂದ ಪ್ರಸ್ತುತ ಆಡಳಿತಾಧಿಕಾರಿಯಾಗಿರುವ ಶ್ರೀ. ಹರೀಶ್ ಕುಮಾರ್, ಸಹಕಾರ ಸಂಘಗಳ ಸಹಾಯಕ ನಿಬಂಧಕರು 3ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರನ್ನು ಬದಲಾಯಿಸಿ ಶ್ರೀ. ಸೋಮಶೇಖರಯ್ಯ, ಸಹಕಾರ ಅಭಿವೃದ್ಧ ಅಧಿಕಾರಿ, ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿ, 1ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರನ್ನು ಆಡಳಿತಾಧಿಕಾರಿಯಾಗಿ ನೇಮಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಇ 71 ಸಿಎಸ್‌ಆರ್ 2023

ಬೆಂಗಳೂರು, ದಿನಾಂಕ: 01.01.2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಅಖಿಲ ಕರ್ನಾಟಕ ಕೊರಮರ ಸಂಘ, ನಂ.19, ಜರ್ನಲಿಸ್ಟ್ ಕಾಲೋನಿ, ಮಾವಳ್ಳಿ ಟ್ಯಾಂಕ್ ಬಂಡ್ ರಸ್ತೆ, ಬೆಂಗಳೂರು, ಈ ಸಂಘದ ಪ್ರಸ್ತುತ ಆಡಳಿತಾಧಿಕಾರಿಯಾಗಿರುವ ಶ್ರೀ. ಹರೀಶ್ ಕುಮಾರ್, ಸಹಕಾರ ಸಂಘಗಳ ಸಹಾಯಕ ನಿಬಂಧಕರು 3ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರನ್ನು ಬದಲಾಯಿಸಿ ಶ್ರೀ. ಸೋಮಶೇಖರಯ್ಯ, ಸಹಕಾರ ಅಭಿವೃದ್ಧಿ ಅಧಿಕಾರಿ, ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿ, 1ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರನ್ನು ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಸಂಘದ ಪ್ರಭಾರ ವಹಿಸಿಕೊಂಡು, ಸಂಘದ ನ್ಯೂನತೆಗಳನ್ನು ಸರಿಪಡಿಸಿ, ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-18

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಗಂಗಾಯಾದವ ಸಂಘ, ಯಾದವ ಸಮುದಾಯ ಭವನ, ಬನಶಂಕರಿ 2ನೇ ಹಂತ, ಬೆಂಗಳೂರು ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ :-
1. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂ.:ಜಂನಿ/(ಐಸಿಡಿಪಿ)/ಸಂಸಂ-02/53/2024-25, ದಿನಾಂಕ: 12.06.2024.
2. ಸರ್ಕಾರದ ನೋಟೀಸ್ ಸಂ:ಸಿಒ 83 ಸಿ.ಎಸ್.ಆರ್ 2024, ದಿನಾಂಕ: 20.06.2024.
3. ಕಾರ್ಯದರ್ಶಿ, ಗಂಗಾಯಾದವ ಸಂಘ, ಬೆಂಗಳೂರು ಇವರ ಲಿಖಿತ ಸಮಜಾಯಿಷಿ ದಿನಾಂಕ:26.06.2024.
4. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂ.:ಜಂನಿ/(ಐಸಿಡಿಪಿ)/ಸಂಸಂ-02/53/2024-25, ದಿನಾಂಕ: 29.08.2024
5. ಸಹಕಾರ ಸಂಘಗಳ ಉಪ ನಿಬಂಧಕರು, 3ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರ ಪತ್ರ ಸಂಖ್ಯೆ:ಡಿಆರ್‌ಬಿ-3/ಸಂಸಂ/ದೂಅ/34/2022-23, ದಿನಾಂಕ:17.11.2025.

*****

ಪ್ರಸ್ತಾವನೆ:

ಮೇಲೆ ಓದಲಾದ (1) ರ ಪತ್ರದಲ್ಲಿ ಗಂಗಾಯಾದವ ಸಂಘ, (ನೋಂದಣಿ ಸಂಖ್ಯೆ:156/1968-69) ಗಂಗಾಯಾದವ ಸಂಘ ರಿ, ಯಾದವ ಸಮುದಾಯ ಭವನ, 5ನೇ ಕ್ರಾಸ್, ಕರಿಸಂದ್ರ, ಬನಶಂಕರಿ 2ನೇ ಹಂತ ಬೆಂಗಳೂರು, ಈ ಸಂಘದ ವಿರುದ್ಧ ದೂರಿನಂತೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 25 ರಡಿ ಶಾಸನಬದ್ಧ ವಿಚಾರಣೆಯು ಪ್ರಗತಿಯಲ್ಲಿದ್ದು, ಸಂಘದ ಕಾರ್ಯಕಾರಿ ಸಮಿತಿಯ ಅವಧಿಯು ಮುಕ್ತಾಯಗೊಂಡಿರುವುದರಿಂದ ಚುನಾವಣೆಯನ್ನು ನಡೆಸಲು ಸಂಘದ ಅಧಕ್ಷರು/ಕಾರ್ಯದರ್ಶಿಯವರಿಗೆ ಸೂಚಿಸಲಾಗಿದ್ದರೂ, ಸಂಘದ ಚುನಾವಣೆಯನ್ನು ನಡೆಸಲು ಹಾಲಿ ಕಾರ್ಯಕಾರಿ ಸಮಿತಿ ವಿಫಲರಾಗಿದ್ದು, ಕಾರ್ಯಕಾರಿ ಸಮಿತಿಯ ಅವಧಿಯು ಮುಕ್ತಾಯವಾಗಿರುವ ಹಿನ್ನೆಲೆಯಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲು ಸಹಕಾರ ಸಂಘಗಳ ಉಪ ನಿಬಂಧಕರು, 3ನೇ ವಲಯ ಇವರ ಶಿಫಾರಸ್ಸನ್ನು ಪರಿಗಣಿಸಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 27ಎ ರನ್ವಯ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಪ್ರಸ್ತಾವನೆಯನ್ನು ಸಹಕಾರ ಸಂಘಗಳ ನಿಬಂಧಕರು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2)ರಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ಏಕೆ ನೇಮಕ ಮಾಡಬಾರದೆಂದು ಲಿಖಿತ ಹೇಳಿಕೆ ಸಲ್ಲಿಸಲು ಅಧ್ಯಕ್ಷರು/ಕಾರ್ಯದರ್ಶಿಯವರಿಗೆ ತಿಳಿಸಲಾಗಿತ್ತು.

ಮೇಲೆ ಓದಲಾದ (3)ರ ಲಿಖಿತ ಹೇಳಿಕೆಯಲ್ಲಿ ಸಂಘದ ಆಡಳಿತ ಮಂಡಳಿಯ ಅಧಿಕಾರಾವದಿಯು ದಿನಾಂಕ: 21.01.2021ಕ್ಕೆ ಅಂತ್ಯಗೊಂಡ ನಂತರ ರಾಜ್ಯದಲ್ಲಿ ಕರೋನ ಸಾಂಕ್ರಾಮಿಕ ಖಾಯಿಲೆಯು ವ್ಯಾಪಿಸಿದ್ದರಿಂದ ಹಾಗೂ ಸಂಘದ ವತಿಯಿಂದ ಶ್ರೀ ಗಂಗಾ ಪರಮೇಶ್ವರಿ ದೇವಸ್ಥಾನದ ನಿರ್ಮಾಣ ಕಾರ್ಯ ಕೈಗೊಂಡಿದ್ದರಿಂದ ಸಕಾಲದಲ್ಲಿ ಸಂಘದ ಕಾರ್ಯಕಾರಿ ಮಂಡಳಿಗೆ ಚುನಾವಣೆ ಮತ್ತು ಮಹಾಸಭೆಗಳನ್ನು ನಡೆಸಲು ಸಾಧ್ಯವಾಗಿರುವುದಿಲ್ಲ. ತತ್ಸಂಬಂಧ ಸಂಘದ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗಿರುತ್ತದೆ. ಸಂಘದ 2017-18 ರಿಂದ 2023-24ನೇ ಸಾಲುಗಳ ವಾರ್ಷಿಕ ಮಹಾ ಸಭೆ ಮತ್ತು 2024-25 ರಿಂದ 2026–27ರವರೆಗೆ 3 ವರ್ಷಗಳ ಅವಧಿಗೆ ಸಂಘದ ಕಾರ್ಯಕಾರಿ ಮಂಡಲಿಗೆ ಚುನಾವಣೆಯನ್ನು ದಿನಾಂಕ:16.06.2024ರಂದು ನಡೆಸಲಾಗಿದೆ. ದಿನಾಂಕ:16.06.2024 ರ ಮಹಾಸಭೆಯಲ್ಲಿ

ಸಂಘದ 2023-24ನೇ ಸಾಲುಗಳವರೆಗೆ ಲೆಕ್ಕಪತ್ರಗಳ ಅನುಮೋದನೆಯಾಗಿದೆ. 2017-18 ರಿಂದ 2023-24ನೇ ಸಾಲುಗಳ ಮಹಾಸಭೆಯಲ್ಲಿ ಕಾರ್ಯಕಲಾಪಗಳನ್ನು ಅಂಗೀಕರಿಸಲಾಗಿದೆ. 2024-25 ರಿಂದ 2026-27ನೇ ಸಾಲುಗಳ ಕಾರ್ಯಕಾರಿ ಮಂಡಳಿ ಪದಾಧಿಕಾರಿಗಳ ಆಯ್ಕೆಯಾಗಿರುವುದಾಗಿ ತಿಳಿಸಿ, ಕರ್ನಾಟಕ ಸಂಘಗಳ ನೊಂದಣಿ ಅಧಿನಿಯಮ 1960ರ ಕಲಂ 27(ಎ)ರನ್ವಯ ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ವಿಚಾರವನ್ನು ಕೈಬಿಡಬೇಕೆಂದು ಕೋರಿರುತ್ತಾರೆ

ಮೇಲೆ ಓದಲಾದ (4)ರ ಸ್ಪಷ್ಟ ಅಭಿಪ್ರಾಯದ ವರದಿಯಲ್ಲಿ, ಸಂಘದ ವಿರುದ್ಧ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 25ರನ್ವಯ ನಡೆಸಿರುವ ವಿಚಾರಣೆಯ ವರದಿಯಲ್ಲಿ ಸಂಘದ ವಿರುದ್ಧ 05 ಆರೋಪಗಳು ಸಾಬೀತಾಗಿದ್ದು, ಅದರಲ್ಲಿ ಪ್ರಮುಖವಾಗಿ, ಪ್ರತಿ ವರ್ಷ ವಾರ್ಷಿಕ ಮಹಾ ಸಭೆಯನ್ನು ನಡೆಸಲು ಹಾಗೂ ಆಯಾ ಸಾಲಿನ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ನಡೆಸಿ ವಾರ್ಷಿಕ ಸಭೆಯಲ್ಲಿ ಮಂಡಿಸಲು ಆಡಳಿತ ಮಂಡಳಿ ವಿಫಲರಾಗಿರುತ್ತಾರೆ. ಸಂಘದ ಸರ್ವಸದಸ್ಯರ ಸಭೆಗೆ ಸದಸ್ಯರಿಗೆ ನೋಟೀಸ್ ಜಾರಿ ಮಾಡಿರುವ ಬಗ್ಗೆ ಸ್ವೀಕೃತಿ ಸಲ್ಲಿಸಿರುವುದಿಲ್ಲ, ಅಲ್ಲದೇ ಸದರಿ ಸಭೆಯಲ್ಲಿ ಸಹಿ ಪಡೆಯಲಾಗಿದೆ ಎನ್ನಲಾದ ಪಟ್ಟಿಯಲ್ಲಿ ದಿನಾಂಕ ನಮೂದಾಗಿರುವುದಿಲ್ಲ, ಅಲ್ಲದೇ ಈಗಿರುವ ಆಡಳಿತ ಮಂಡಳಿಯಲ್ಲಿ ಒಮ್ಮತ ಇಲ್ಲದೇ ಇರುವುದು ಕಂಡು ಬಂದಿದ್ದು, ಕಲಂ.25ರ ವಿಚಾರಣಾ ವರದಿಯಂತೆ ಸಂಘದ ಈ ಹಿಂದಿನ ಕಾರ್ಯಕಾರಿ ಸಮಿತಿಯು ಬೈಲಾ ಉಲ್ಲಂಘಿಸಿದ್ದು, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ.11, 12 ಮತ್ತು 13ರ ಸ್ಪಷ್ಟವಾಗಿ ಉಲ್ಲಂಘನೆಯಾಗಿರುವುದಾಗಿ ತಿಳಿಸಿ, ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವುದು ಸೂಕ್ತವೆಂಬ ಉಪ ನಿಬಂಧಕರ ಅಭಿಪ್ರಾಯದಂತೆ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿ ನ್ಯೂನತೆಗಳನ್ನು ಸರಿಪಡಿಸಲು ಕ್ರಮವಿಡುವುದು ಸಮಂಜಸವೆಂದು ಅಭಿಪ್ರಾಯಪಟ್ಟು ನಿಬಂಧಕರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (5)ರ ಸ್ಪಷ್ಟ ಅಭಿಪ್ರಾಯದ ವರದಿಯಲ್ಲಿ, ಗಂಗಾ ಯಾದವ ಸಂಘದ ಹಿಂದಿನ ಕಾರ್ಯಕಾರಿ ಸಮಿತಿಯಲ್ಲಿ ಬೈಲಾ ಉಲ್ಲಂಘಿಸಿರುವುದು ಹಾಗೂ ಕರ್ನಾಟಕ ಸಂಘಗಳ ಕಾಯ್ದೆ 1960 ರ ಕಲಂ 11, 12 ಮತ್ತು 13 ಅನ್ನು ಸ್ಪಷ್ಟವಾಗಿ ಉಲ್ಲಂಘಿಸಿರುವುದು ಕಲಂ 25 ರ ವಿಚಾರಣೆಯಲ್ಲಿ ದೃಢಪಟ್ಟ ಹಿನ್ನೆಲೆಯಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವಂತೆ ಕೋರಿ ಈ ಹಿಂದೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು, ಸಂಘದ ವಿರುದ್ಧದ ಕಲಂ 25ರ ವಿಚಾರಣಾ ವರದಿಯನ್ನು ಕಲಂ. 25 (2) (ಸಿ) (iii) ರನ್ವಯ ಕಳುಹಿಸಿ ವರದಿಯಲ್ಲಿ ಸಾಬೀತಾಗಿರುವ ನ್ಯೂನತೆಗಳನ್ನು ಸರಿಪಡಿಸಿ ಅನುಪಾಲನಾ ವರದಿಯನ್ನು ಸಲ್ಲಿಸಲು ದಿನಾಂಕ:02.09.2024ರ ಪತ್ರದಲ್ಲಿ ಸಂಘಕ್ಕೆ ಸೂಚಿಸಲಾಗಿದ್ದರೂ, ಸಂಘದಿಂದ ಅನುಪಾಲನಾ ವರದಿ ಸ್ವೀಕೃತವಾಗಿರುವುದಿಲ್ಲ. ಅಲ್ಲದೇ ಸದರಿ ಕಲಂ 25 ರ ವಿಚಾರಣಾ ವರದಿಯನ್ವಯ ಕೈಗೊಂಡ ಕ್ರಮಗಳ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಛೇರಿಗೆ ಮಾಹಿತಿಯನ್ನು ಸಲ್ಲಿಸಲಾಗಿರುತ್ತದೆ. ಸಂಘವು ವಿಚಾರಣಾ ವರದಿಯಂತೆ ಸಂಘದಲ್ಲಿನ ನ್ಯೂನತೆಗಳನ್ನು ಸರಿಪಡಿಸಿ ಅನುಪಾಲನಾ ವರದಿಯನ್ನು ಸಲ್ಲಿಸಲು ವಿಫಲರಾಗಿರುವ ಹಿನ್ನೆಲೆಯಲ್ಲಿ ಗಂಗಾ ಯಾದವ ಸಂಘ (ಲ), ಬೆಂಗಳೂರು ಈ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27-ಎ ರನ್ವಯ ಆಡಳಿತಾಧಿಕಾರಿಯನ್ನು ನೇಮಿಸಬಹುದಾಗಿರುತ್ತದೆ ಎಂದು ಅಭಿಪ್ರಾಯಿಸಿ ವರದಿಯನ್ನು ಸಲ್ಲಿಸಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವನೆ ಮತ್ತು ಸಂಘದ ಲಿಖಿತ ಹೇಳಿಕೆ ಹಾಗೂ ಉಪ ನಿಬಂಧಕರ ಸ್ಪಷ್ಟ ಅಭಿಪ್ರಾಯವನ್ನು ಪರಿಶೀಲಿಸಲಾಗಿ, ಸಂಘದ ಆಡಳಿತ ಮಂಡಳಿಯು ಕಲಂ 25ರ ವಿಚಾರಣಾ ವರದಿಯಲ್ಲಿ ಸಾಬೀತಾಗಿರುವ ನ್ಯೂನತೆಗಳನ್ನು ಸರಿಪಡಿಸಿಕೊಂಡು ವರದಿಯನ್ನು ಸಲ್ಲಿಸುವಂತೆ ಕಾಯ್ದೆಯ ಕಲಂ. 25 (2) (ಸಿ) (iii) ರನ್ವಯ ಕಳುಹಿಸಲಾಗಿದ್ದರೂ ಸಂಘವು ಅನುಪಾಲನಾ ವರದಿಯನ್ನು ಸಲ್ಲಿಸಲು ವಿಫಲವಾಗಿರುವುದರಿಂದ, ಸಂಘದ ಈ ಹಿಂದಿನ ಕಾರ್ಯಕಾರಿ ಸಮಿತಿಯು ಬೈಲಾ ಹಾಗೂ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ.11, 12 ಮತ್ತು

13ನ್ನು ಸ್ಪಷ್ಟವಾಗಿ ಉಲ್ಲಂಘನೆ ಮಾಡಿರುವ ಹಿನ್ನೆಲೆಯಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿ, ಅವರ ನೇತೃತ್ವದಲ್ಲಿ ಸಂಘದ ನ್ಯೂನತೆಗಳನ್ನು ಸರಿಪಡಿಸಿ, ಬೈಲಾ ರೀತ್ಯ ಸಂಘದ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ನೂತನ ಚುನಾಯಿತ ಆಡಳಿತ ಮಂಡಳಿಗೆ ಪ್ರಭಾರವನ್ನು ಹಸ್ತಾಂತರಿಸುವುದು ಸೂಕ್ತವೆಂದು ಮನಗಂಡು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ. 27(ಎ) ರನ್ವಯ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಒ 83 ಸಿಎಸ್‌ಆರ್ 2024

ಬೆಂಗಳೂರು, ದಿನಾಂಕ: 06.01.2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27-ಎ ರನ್ವಯ ಗಂಗಾಯಾದವ ಸಂಘ,(ನೋಂದಣಿ ಸಂಖ್ಯೆ:156/1968-69) ಯಾದವ ಸಮುದಾಯ ಭವನ, 5ನೇ ಕ್ರಾಸ್, ಕರಿಸಂದ್ರ, ಬನಶಂಕರಿ 2ನೇ ಹಂತ ಬೆಂಗಳೂರು ಈ ಸಂಘಕ್ಕೆ ಶ್ರೀ ಎನ್.ಓ.ಚಂದ್ರಶೇಖರ್, ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು, ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ, 3ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಮುಂದಿನ 06 ತಿಂಗಳ ಅವಧಿಗೆ ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಸಂಘದ ಪ್ರಭಾರವನ್ನು ವಹಿಸಿಕೊಂಡು, ಸಂಘದಲ್ಲಿನ ನ್ಯೂನತೆಗಳನ್ನು ನಿಯಮಾನುಸಾರ ಸರಿಪಡಿಸಿ, ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-19

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಬುದ್ಧ ಅಂಬೇಡ್ಕರ ಅಭಿವೃದ್ಧಿ ಸಮಿತಿ, ಸದಲಗಾ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ :-
1. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂ.:ಆರ್‌ಸಿಎಸ್/ಸಂಘ ಸಂಸ್ಥೆ-01/65/2024-25, ದಿನಾಂಕ: 18.03.2025.
2. ಸರ್ಕಾರದ ನೋಟೀಸ್ ಸಂ:ಸಿಒ 107 ಸಿಎಸ್‌ಆರ್ 2025, ದಿನಾಂಕ: 27.03.2025 ಮತ್ತು ಅಂತಿಮ ನೋಟಿಸ್ ದಿನಾಂಕ:06.05.2025.
3. ಶ್ರೀ. ವಿನಾಯಕ ಬಿ. ಮಾಳಗೆ, ಅಧ್ಯಕ್ಷರು, ಬುದ್ಧ ಅಂಬೇಡ್ಕರ ಅಭಿವೃದ್ಧಿ ಸಮಿತಿ, ಸದಲಗಾ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ಲಿಖಿತ ಸಮಜಾಯಿಷಿ ದಿನಾಂಕ: 20.05.2025.
4. ಸಹಕಾರ ಸಂಘಗಳ ಉಪ ನಿಬಂಧಕರು, ಬೆಳಗಾವಿ ಜಿಲ್ಲೆ ಇವರ ಪತ್ರ ಸಂಖ್ಯೆ:ಡಿಆರ್‌ಎಲ್/ಎಸ್‌ಓಆರ್/ವಿಚಾರಣೆ/05/2023-24, ದಿನಾಂಕ:29.08.2025.

*****

ಪ್ರಸ್ತಾವನೆ:

ಮೇಲೆ ಓದಲಾದ (1) ರ ಪತ್ರದಲ್ಲಿ ಬುದ್ಧ ಅಂಬೇಡ್ಕರ ಅಭಿವೃದ್ಧಿ ಸಮಿತಿ, (ನೋಂದಣಿ ಸಂಖ್ಯೆ:BEL/S935/2012-13) ಸದಲಗಾ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ, ಈ ಸಂಘದ ವಿರುದ್ಧದ ದೂರು ಅರ್ಜಿಯಂತೆ ವಿಚಾರಣೆ ಜರುಗಿಸಿ ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ, ಸಂಘವು ಕಾಯ್ದೆ, ನಿಯಮ, ಬೈಲಾ ಉಲ್ಲಂಘನೆ ಹಾಗೂ ಕಟ್ಟಡ ಕಾಮಗಾರಿಗಳ ಬಗ್ಗೆ ಮತ್ತು ಸರ್ಕಾರದ ಅನುದಾನದ ದುರುಪಯೋಗದ ಆರೋಪಗಳಿದ್ದು, ಸದರಿ ವರದಿಯಲ್ಲಿನ ಅಂಶಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸಂಘಗಳ ನಿಯಮಗಳು 1961 ನಿಯಮ 8(5) ರಡಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿಗಳಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ತಿಳಿಸಲಾಗಿದ್ದು, ಅದರಂತೆ ಸಂಘದ ಸಮಿತಿಯು ಕೇವಲ ರೂ.10 ಲಕ್ಷ ಅನುದಾನದ ಬಗ್ಗೆ ಮಾತ್ರ ಆಕ್ಷೇಪಣೆ ಸಲ್ಲಿಸಿದ್ದು, ಇನ್ನಿತರೆ ಸರ್ಕಾರದ ಅನುದಾನ ದುರ್ಬಳಕೆ ಮತ್ತು ಬೈಲಾ ಉಲ್ಲಂಘನೆ ಬಗ್ಗೆ ಆಕ್ಷೇಪಣೆ ಸಲ್ಲಿಸಿರುವುದಿಲ್ಲವೆಂದೂ, ವಿಚಾರಣಾ ವರದಿಯಲ್ಲಿ 2014-15 ನೇ ಸಾಲಿನಲ್ಲಿ ಜೀರ್ಣೋದ್ಧಾರ/ಕಟ್ಟಡ ಕಾಮಗಾರಿಗಾಗಿ ಸರ್ಕಾರದಿಂದ ಮಂಜೂರಾದ ರೂ.10 ಲಕ್ಷಗಳ ಅನುದಾನ ದುರ್ಬಳಕೆ ಹಾಗೂ 2022-23ನೇ ಸಾಲಿನಲ್ಲಿ ಸರ್ಕಾರದಿಂದ ಮತ್ತು ಪಟ್ಟಣ ಪಂಚಾಯಿತಿಯಿಂದ ಮಂಜೂರಾದ ಅನುದಾನದಲ್ಲಿ ವಿವಿಧ ವ್ಯಕ್ತಿಗಳಿಗೆ ಪಾವತಿ ಮಾಡಿರುವ ಒಟ್ಟು ರೂ.13.10 ಲಕ್ಷಗಳ ಹಣವನ್ನು ಯಾವ ಉದ್ದೇಶಕ್ಕಾಗಿ ಪಾವತಿಸಲಾಗಿದೆ ಎಂಬ ಬಗ್ಗೆ ಯಾವುದೇ ದಾಖಲೆ ನಿರ್ವಹಣೆ ಮಾಡಿರುವುದಿಲ್ಲ ಹಾಗೂ ಸದರಿ ಮೊತ್ತಗಳ ಸ್ವೀಕೃತಿ ರಸೀದಿ ನಿರ್ವಹಿಸದೇ, ಸಂಘದ ಬೈಲಾ ಸಂಖ್ಯೆ 9(ಅ) ಹಾಗೂ 19(ಅ) ಉಲ್ಲಂಘನೆಯಾಗಿದ್ದು ಹಾಗೂ ಸಂಘದಲ್ಲಿ ನಗದು ಪುಸ್ತಕವನ್ನು ನಿರ್ವಹಣೆ ಮಾಡಿರುವುದಿಲ್ಲವೆಂದು ತಿಳಿಸಿ, ಸಂಘದ ವ್ಯವಹಾರವನ್ನು ಕಾಯ್ದೆ, ನಿಯಮ ಮತ್ತು ಬೈಲಾದಂತೆ ನಿರ್ವಹಿಸಲು ಸಂಪೂರ್ಣವಾಗಿ ವಿಫಲರಾಗಿ, ಇದಕ್ಕೆ ಸಂಘದ ಆಯಾ ಅವಧಿಯ ಕಾರ್ಯದರ್ಶಿ, ಖಜಾಂಚಿ ಹಾಗೂ ಆಡಳಿತ ಮಂಡಳಿ ಸದಸ್ಯರುಗಳು ಹೊಣೆಗಾರರೆಂದು, ವಿಚಾರಣಾಧಿಕಾರಿಗಳ ವರದಿಯಂತೆ ಸಂಘವು ನೋಂದಣಿ ಕಾಯ್ದೆ ಮತ್ತು ನಿಯಮಗಳನ್ನು ಉಲ್ಲಂಘಿಸಿರುವುದು ದೃಢಪಟ್ಟಿರುವ ಹಿನ್ನೆಲೆಯಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲು ಸಹಕಾರ ಸಂಘಗಳ ಉಪ ನಿಬಂಧಕರು, ಬೆಳಗಾವಿ ಜಿಲ್ಲೆ ಇವರು ಮಾಡಿರುವ ಶಿಫಾರಸ್ಸನ್ನು ಪರಿಗಣಿಸಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 27ಎ ರನ್ವಯ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲು ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2)ರ ನೋಟಿಸ್‌ನಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ಏಕೆ ನೇಮಕ ಮಾಡಬಾರದೆಂದು ಲಿಖಿತ ಹೇಳಿಕೆ ಸಲ್ಲಿಸಲು ಅಧ್ಯಕ್ಷರು/ಕಾರ್ಯದರ್ಶಿಯವರಿಗೆ ತಿಳಿಸಲಾಗಿತ್ತು.

ಮೇಲೆ ಓದಲಾದ (3)ರ ಲಿಖಿತ ಹೇಳಿಕೆಯಲ್ಲಿ ಬುದ್ಧ ಅಂಬೇಡ್ಕರ ಅಭಿವೃದ್ಧಿ ಸಮಿತಿ ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲು ಆಕ್ಷೇಪಣೆ ಸಲ್ಲಿಸಿ, ಸನ್ 2014-15 ನೇ ಸಾಲಿನಲ್ಲಿ ಬುದ್ಧ ಅಂಬೇಡ್ಕರ ಅಭಿವೃದ್ಧಿ ಸಮಿತಿಗೆ ಮಂಜೂರಾಗಿದ್ದ ಹತ್ತು ಲಕ್ಷ ಅನುದಾನದಲ್ಲಿ ಬುದ್ಧ ಪ್ರಾರ್ಥನಾ ಮಂದಿರ ಕಟ್ಟಡ ನಿರ್ಮಿಸಿದ್ದು, ಸಂಘದಿಂದ ಯಾವುದೇ ಹಣ ದುರ್ಬಳಕೆ ಮಾಡಿರುವುದಿಲ್ಲವೆಂದು, ಈ ವಿಷಯಕ್ಕೆ ಸಂಬಂಧಿಸಿದಂತೆ ಸಂಜೀವ ಭೀಮರಾವ ಕಾಂಬಳೆ ಇವರು ಸಹಕಾರ ಸಂಘಗಳ ಉಪ ನಿಬಂಧಕರು, ಬೆಳಗಾವಿ, ಇವರಲ್ಲಿ ದೂರು ಸಲ್ಲಿಸಿದ್ದರು. ಅದರಂತೆ ಮನೋಹರ ಸಂಗಪ್ಪಾ ಹೇಗ್ರೆ ಇವರು ಕೂಡ ಚಿಕ್ಕೋಡಿ ನ್ಯಾಯಾಲಯದಲ್ಲಿ ಸಮಿತಿಯ ಮೇಲೆ ಹೂಡಿದ್ದ ದಾವೆಯನ್ನು ಸಮಿತಿ ವತಿಯಿಂದ ಉಚ್ಚ ನ್ಯಾಯಾಲಯ, ಧಾರವಾಡ, ಇಲ್ಲಿ ಹೂಡಿದ್ದ ದಾವೆಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:04.03.2025 ರಂದು ರದ್ದು ಮಾಡಿದ್ದು, ಸರ್ಕಾರಕ್ಕೆ ಸಲ್ಲಿಸಿರುವ ವರದಿ ತಪ್ಪಾಗಿದ್ದು ಅದನ್ನು ಮರು ಪರಿಶೀಲನೆ ಮಾಡಿ ಮತ್ತು ಉಚ್ಚ ನ್ಯಾಯಾಲಯ ಧಾರವಾಡ ಇವರ ಆದೇಶದಲ್ಲಿ ಸಮಿತಿಯ ಮೇಲೆ ಮಾಡಿರುವ ಆಪಾದನೆ ರದ್ದು ಆಗಿರುವ ಕಾರಣ ಸಂಘದ ಸಮಿತಿಯನ್ನು ಮುಂದುವರೆಸಲು ಅವಕಾಶ ನೀಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ (4)ರ ಸ್ಪಷ್ಟ ಅಭಿಪ್ರಾಯದ ವರದಿಯಲ್ಲಿ ವಿಚಾರಣಾ ವರದಿಯಲ್ಲಿ ಸರ್ಕಾರದಿಂದ ಜೀರ್ಣೋದ್ಧಾರ/ಕಟ್ಟಡ ಕಾಮಗಾರಿಗಾಗಿ 2014-15 ನೇ ಸಾಲಿನಲ್ಲಿ ಮಂಜೂರಾದ ಅನುದಾನ ದುರ್ಬಳಕೆ ಆಗಿದ್ದು, ಸರ್ಕಾರದಿಂದ ಮಂಜೂರಾದ ಅನುದಾನದ ಪೈಕಿ ರೂ. 13.10 ಲಕ್ಷಗಳ ಹಣವನ್ನು ಯಾವ ಉದ್ದೇಶಕ್ಕಾಗಿ ಪಾವತಿ ಮಾಡಲಾಗಿದೆ ಎನ್ನುವ ಬಗ್ಗೆ ಯಾವುದೇ ದಾಖಲೆ ನಿರ್ವಹಣೆ ಮಾಡಿರುವುದಿಲ್ಲ ಹಾಗೂ ಸ್ವೀಕೃತಿ ರಸೀದಿಗಳನ್ನು ಸಹ ನಿರ್ವಹಣೆ ಮಾಡಿರುವುದಿಲ್ಲ. ಸದರಿ ಕ್ರಮವು ಸಂಘದ ಬೈಲಾ ನಂ. 9(ಅ) ಹಾಗೂ 10(ಅ) ಉಲ್ಲಂಘನೆ ಆಗಿರುತ್ತದೆ. ಅಲ್ಲದೇ ಸಂಘದ ನಗದು ಪುಸ್ತಕ ನಿರ್ವಹಣೆ ಮಾಡಿರುವುದಿಲ್ಲ. ಸಂಘದ ಆಡಳಿತ ಮಂಡಳಿ ಸಂಘದ ವ್ಯವಹಾರವನ್ನು ಕಾಯ್ದೆ ನಿಯಮ ಮತ್ತು ಸಂಘದ ಬೈಲಾಗಳನ್ವಯ ನಿರ್ವಹಿಸಿಕೊಂಡು ಹೋಗಲು ಸಂಪೂರ್ಣವಾಗಿ ವಿಫಲರಾಗಿದ್ದು, ಇದಕ್ಕೆ ಸಂಘದ ಆಯಾ ಅವಧಿಯ ಕಾರ್ಯದರ್ಶಿ, ಖಜಾಂಚಿ ಹಾಗೂ ಆಡಳಿತ ಮಂಡಳಿ ಸದಸ್ಯರುಗಳು ಹೊಣೆಗಾರರಾಗಿರುತ್ತಾರೆ ಎಂದು ವಿಚಾರಣಾಧಿಕಾರಿಗಳು ವರದಿ ಸಲ್ಲಿಸಿದ್ದು, ಸಂಘದಿಂದ ರೂ. 10.00 ಲಕ್ಷಗಳ ಸರಕಾರದ ಅನುದಾನವನ್ನು ಬಳಕೆ ಮಾಡಿರುವ ಕುರಿತು ಬಳಕೆ ಪ್ರಮಾಣ Assistant Executive Engineer PWD & I.W.T.D. Sub division, Chikodi ರಿಂದ ಸಲ್ಲಿಸಲಾಗಿದೆ ಎಂದು ನಕಲು ಪ್ರತಿಯನ್ನು ಸಂಘದ ಅಧ್ಯಕ್ಷರು ಸಲ್ಲಿಸಿರುತ್ತಾರೆ. ಆದರೆ ವಿಚಾರಣಾಧಿಕಾರಿಗಳ ವರದಿಯಲ್ಲಿ "ಮಾನ್ಯ ಸಹಾಯಕ ಆಯುಕ್ತರು, ಹಿಂದೂ ಧಾರ್ಮಿಕ ದತ್ತಿ ಇಲಾಖೆ, ಬೆಳಗಾವಿ ಜಿಲ್ಲೆ, ಇವರ ವರದಿ ಸಂಖ್ಯೆ:ಆ(ಮು)/ಸಿಎನ್ಆರ್-210/2022-23, ದಿನಾಂಕ:29.09.2023 ರಲ್ಲಿ ಸಂಘದ ದಾಖಲಾತಿಗಳು ಹಾಗೂ ಸ್ಥಳ ತನಿಖೆ ಕೈಗೊಂಡು ಶ್ರೀ ಬೌದ್ಧ ಪ್ರಾರ್ಥನಾ ಮಂದಿರ, ಸದಲಗಾ, ಇದಕ್ಕೆ ಸರ್ಕಾರದಿಂದ ಅನುದಾನ ರೂ. 10.00 ಲಕ್ಷಗಳನ್ನು ಪಡೆಯುವಲ್ಲಿ ಸಂಸ್ಥೆಯ ಸಮಿತಿ ಸದಸ್ಯರು ಖೊಟ್ಟಿ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆಂದು ವರದಿ ಸಲ್ಲಿಸಿರುತ್ತಾರೆ. ಈ ಕಾರಣಗಳ ಹಿನ್ನಲೆಯಲ್ಲಿ ಬುದ್ಧ ಅಂಬೇಡ್ಕರ ಅಭಿವೃದ್ಧಿ ಸಮಿತಿ, ಸಾ:ಸದಲಗಾ (ಅಂಬೇಡ್ಕರ ನಗರ) ತಾ:ಚಿಕ್ಕೋಡಿ, ಜಿಲ್ಲಾ: ಬೆಳಗಾವಿ, ಈ ಸಂಘಕ್ಕೆ ಆಡಳಿತಾಧಿಕಾರಿ ನೇಮಕ ಮಾಡುವುದು ಸೂಕ್ತವೆಂದು ಅಭಿಪ್ರಾಯಪಟ್ಟು ವರದಿಯನ್ನು ಸಲ್ಲಿಸಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವನೆ ಮತ್ತು ಸಂಘದ ಲಿಖಿತ ಹೇಳಿಕೆ ಹಾಗೂ ಉಪ ನಿಬಂಧಕರ ಸ್ಪಷ್ಟ ಅಭಿಪ್ರಾಯವನ್ನು ಪರಿಶೀಲಿಸಲಾಗಿ, ಸಂಘಕ್ಕೆ ಸರ್ಕಾರದಿಂದ ಮಂಜೂರಾದ ಅನುದಾನ ದುರ್ಬಳಕೆ ಮಾಡಿ, ಸದರಿ ಹಣವನ್ನು ಯಾವ ಉದ್ದೇಶಕ್ಕಾಗಿ ಬಳಸಲಾಗಿದೆ ಎಂಬ ಬಗ್ಗೆ ದಾಖಲೆಗಳನ್ನು ನಿರ್ವಹಣೆ ಮಾಡದೇ, ಸ್ವೀಕೃತಿ ರಸೀದಿಗಳನ್ನು ಸಹ ನಿರ್ವಹಣೆ ಮಾಡದೇ ಮತ್ತು ನಗದು ಪುಸ್ತಕ ನಿರ್ವಹಣೆ ಮಾಡದೇ ದುರಾಡಳಿತದಿಂದ ಸಂಘದ ಬೈಲಾ ನಂ.9(ಅ) ಹಾಗೂ 10(ಅ) ಉಲ್ಲಂಘನೆ ಆಗಿರುತ್ತದೆ. ಸಂಘದ ವ್ಯವಹಾರವನ್ನು ಕಾಯ್ದೆ ನಿಯಮ ಮತ್ತು ಸಂಘದ ಬೈಲಾಗಳನ್ವಯ ನಿರ್ವಹಿಸಲು ಆಡಳಿತ ಮಂಡಳಿ ವಿಫಲರಾಗಿರುವ ಹಿನ್ನೆಲೆಯಲ್ಲಿ, ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿ, ಅವರ ನೇತೃತ್ವದಲ್ಲಿ ಸಂಘದ ನ್ಯೂನತೆಗಳನ್ನು ಸರಿಪಡಿಸಿ, ಬೈಲಾ ರೀತ್ಯ ಸಂಘದ ನೂತನ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ನೂತನ ಚುನಾಯಿತ ಆಡಳಿತ ಮಂಡಳಿಗೆ ಪ್ರಭಾರವನ್ನು ಹಸ್ತಾಂತರಿಸುವುದು ಸೂಕ್ತವೆಂದು ಮನಗಂಡು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ. 27(ಎ) ರನ್ವಯ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಒ 107 ಸಿಎಸ್ಆರ್ 2025

ಬೆಂಗಳೂರು, ದಿನಾಂಕ: 02.01.2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27-ಎ ರನ್ವಯ ಬುದ್ಧ ಅಂಬೇಡ್ಕರ ಅಭಿವೃದ್ಧಿ ಸಮಿತಿ, (ನೋಂದಣಿ ಸಂಖ್ಯೆ:BEL/S935/2012-13) ಸದಲಗಾ, ಚಿಕ್ಕೋಡಿ

ತಾಲ್ಲೂಕು, ಬೆಳಗಾವಿ ಜಿಲ್ಲೆ, ಈ ಸಂಘಕ್ಕೆ ತಹಶೀಲ್ದಾರ್, ಚಿಕ್ಕೋಡಿ, ಬೆಳಗಾವಿ ಜಿಲ್ಲೆ ಇವರನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಮುಂದಿನ **06** ತಿಂಗಳ ಅವಧಿಗೆ ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಸಂಘದ ಪ್ರಭಾರವನ್ನು ವಹಿಸಿಕೊಂಡು, ಸಂಘದಲ್ಲಿನ ನ್ಯೂನತೆಗಳನ್ನು ನಿಯಮಾನುಸಾರ ಸಿರಿಪಡಿಸಿ, ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-20

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಗಂಗಾ ಬ್ಲಾಕ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೆಷನ್, ಎನ್‌ಜಿವಿ ಕೋರಮಂಗಲ, ಬೆಂಗಳೂರು ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ :- **1)** ಸಹಕಾರ ಸಂಘಗಳ ನಿಬಂಧಕರ ಪತ್ರ ಸಂ.:ಆರ್‌ಸಿಎಸ್/ಸಂಘ-ಸಂಸ್ಥೆ-**02/22/2025-26**, ದಿನಾಂಕ: **07.05.2025.**

2) ಸರ್ಕಾರದ ನೋಟೀಸ್ ಸಂ:ಸಿಒ **147** ಸಿ.ಎಸ್.ಆರ್ **2025**, ದಿನಾಂಕ:**15.05.2025** ಮತ್ತು ಅಂತಿಮ ನೋಟಿಸ್ ದಿನಾಂಕ:**10.06.2025.**

*****

ಪ್ರಸ್ತಾವನೆ:

ಮೇಲೆ ಓದಲಾದ **(1)** ರ ಪತ್ರದಲ್ಲಿ ಗಂಗಾ ಬ್ಲಾಕ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೆಷನ್,**(**ನೋಂದಣಿ ಸಂಖ್ಯೆ:**150/04-05)** ಎನ್‌ಜಿವಿ, ಕೋರಮಂಗಲ, ಬೆಂಗಳೂರು ಈ ಸಂಘದ ಕಾರ್ಯನಿರ್ವಹಣೆ ಕುರಿತು ಸಲ್ಲಿಸಿದ್ದ ದೂರು ಅರ್ಜಿಯಂತೆ ವಿಚಾರಣೆಗೆ ವಿವಿಧ ದಿನಾಂಕಗಳಂದು ನೋಟೀಸ್ ಜಾರಿ ಮಾಡಿದ್ದರೂ ವಿಚಾರಣೆಗೆ ಹಾಜರಾಗಿರುವುದಿಲ್ಲ, ಸಂಘದ ಮನವಿ ಮೇರೆಗೆ ದಿನಾಂಕ:**15-12-2024**ರ ವಾರ್ಷಿಕ ಮಹಾಸಭೆಗೆ ವೀಕ್ಷಕರಾಗಿ ನಿಯೋಜಿಸಿದ್ದ ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು ಸಲ್ಲಿಸಿರುವ ವರದಿಯಲ್ಲಿ ಸಂಘವು ನೂತನ ಕಾರ್ಯಕಾರಿ ಸಮಿತಿಗೆ ಕಾಯ್ದೆ ಮತ್ತು ಬೈಲಾ ಅವಕಾಶದನ್ವಯ ಚುನಾವಣಾ ಪ್ರಕ್ರಿಯೆ ನಡೆಸಿರುವುದಿಲ್ಲ ಹಾಗೂ ನಿಯಮಾನುಸಾರ ಆಯ್ಕೆ ಮಾಡಿರುವುದಿಲ್ಲ. ಸಂಘದ ಚುನಾವಣೆಗೆ ರಿಟರ್ನಿಂಗ್ ಅಧಿಕಾರಿಯನ್ನು ನೇಮಿಸಿಕೊಳ್ಳದೆಯೇ ಚುನಾವಣಾ ಪ್ರಕ್ರಿಯೆ ಕೈಗೊಂಡು, ಸಂಘದ ಕಾರ್ಯಕಾರಿ ಸಮಿತಿಗೆ ಬೈಲಾದಲ್ಲಿ ನಿಗದಿತ ಸಂಖ್ಯೆಗಿಂತ ಕಡಿಮೆ ಸ್ಥಾನಗಳಿಗೆ ಅಂದರೆ **05** ಸದಸ್ಯರನ್ನು ಮಾತ್ರ ಆಯ್ಕೆ ಮಾಡಿರುವುದು ನಿಯಮಬಾಹಿರವಾಗಿರುವುದಾಗಿ ವರದಿ ಸಲ್ಲಿಸಿದ್ದು, ಸದರಿ ವರದಿಯಂತೆ ಸಂಘವು ಬೈಲಾ ಉಲ್ಲಂಘನೆ ಮಾಡಿರುವುದು ಹಾಗೂ ಸಂಘದ ಚುನಾವಣೆಯನ್ನು ನಿಯಮಬಾಹಿರವಾಗಿ ನಡೆಸಿರುವುದು ಮತ್ತು ವಾರ್ಷಿಕ ಮಹಾಸಭೆಯನ್ನು ನಡೆಸಿದ್ದರೂ ತಹಲ್‌ವರೆಗೆ ಕಾಯ್ದೆಯ ಕಲಂ **13** ರಂತೆ

ಕ್ರಮ ವಹಿಸದೇ ಇರುವ ಹಿನ್ನೆಲೆಯಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲು ಅಭಿಪ್ರಾಯಪಟ್ಟು ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಜಿಲ್ಲಾ ಸಂಘಗಳ ನೋಂದಣಾಧಿಕಾರಿಗಳು, 3ನೇ ವಲಯ ಇವರ ಶಿಫಾರಸ್ಸನ್ನು ಪರಿಗಣಿಸಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 27 (ಎ) ರೀತ್ಯಾ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲು ಸಹಕಾರ ಸಂಘಗಳ ನಿಬಂಧಕರು ಪ್ರಸ್ತಾವೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2)ರ ನೋಟಿಸ್ ಮತ್ತು ಅಂತಿಮ ನೋಟಿಸಿನಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ಏಕೆ ನೇಮಕ ಮಾಡಬಾರದೆಂದು ಲಿಖಿತ ಹೇಳಿಕೆ ಸಲ್ಲಿಸಲು ಅಧ್ಯಕ್ಷರು/ಕಾರ್ಯದರ್ಶಿಯವರಿಗೆ ತಿಳಿಸಲಾಗಿತ್ತು. ಆದರೆ ಸಂಘದಿಂದ ಯಾವುದೇ ಲಿಖಿತ ಹೇಳಿಕೆ ಸ್ವೀಕೃತವಾಗಿರುವುದಿಲ್ಲ.

ಸರ್ಕಾರದ ನೋಟೀಸ್‌ಗೆ ಸಂಘದಿಂದ ಯಾವುದೇ ಲಿಖಿತ ಹೇಳಿಕೆ ಸ್ವೀಕೃತವಾಗದ ಕಾರಣ, ಸಂಘದ ವಿರುದ್ಧದ ಆರೋಪಗಳನ್ನು ಸಮರ್ಥಿಸಿಕೊಳ್ಳಲು ಯಾವುದೇ ಹೇಳಿಕೆ ಇಲ್ಲವೆಂದು ಪರಿಭಾವಿಸಿ, ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸಂಘದ ಮನವಿ ಮೇರೆಗೆ ದಿನಾಂಕ:15-12-2024ರ ವಾರ್ಷಿಕ ಮಹಾಸಭೆಗೆ ನಿಯೋಜಿಸಿದ್ದ ವೀಕ್ಷಕರ ವರದಿಯಲ್ಲಿ ಸಂಘವು ನೂತನ ಕಾರ್ಯಕಾರಿ ಸಮಿತಿಯನ್ನು ಕಾಯ್ದೆ ಮತ್ತು ಬೈಲಾ ಅವಕಾಶದನ್ವಯ ಚುನಾವಣಾ ಪ್ರಕ್ರಿಯೆ ನಡೆಸಿರುವುದಿಲ್ಲ ಹಾಗೂ ನಿಯಮಾನುಸಾರ ಆಯ್ಕೆ ಮಾಡಿರುವುದಿಲ್ಲ. ಸಂಘದ ಚುನಾವಣೆಗೆ ರಿಟರ್ನಿಂಗ್ ಅಧಿಕಾರಿಯನ್ನು ನೇಮಿಸಿಕೊಳ್ಳದೆಯೇ ಚುನಾವಣಾ ಪ್ರಕ್ರಿಯೆ ಕೈಗೊಂಡು, ಸಂಘದ ಕಾರ್ಯಕಾರಿ ಸಮಿತಿಗೆ ಬೈಲಾದಲ್ಲಿ ನಿಗದಿತ ಸಂಖ್ಯೆಗಿಂತ ಕಡಿಮೆ ಸ್ಥಾನಗಳಿಗೆ ಅಂದರೆ 05 ಸದಸ್ಯರನ್ನು ಮಾತ್ರ ಆಯ್ಕೆ ಮಾಡಿರುವುದು ನಿಯಮಬಾಹಿರವಾಗಿರುವುದಾಗಿ ವರದಿ ಸಲ್ಲಿಸಿದ್ದು, ಸದರಿ ವರದಿಯಂತೆ ಸಂಘವು ಬೈಲಾ ಉಲ್ಲಂಘನೆ ಮಾಡಿರುವುದು ಹಾಗೂ ಸಂಘದ ಚುನಾವಣೆಯನ್ನು ನಿಯಮಬಾಹಿರವಾಗಿ ನಡೆಸಿರುವುದು ಮತ್ತು ವಾರ್ಷಿಕ ಮಹಾಸಭೆಯನ್ನು ನಡೆಸಿದ್ದರೂ ತಹಲ್‌ವರೆಗೆ ಕಾಯ್ದೆಯ ಕಲಂ 13 ರಂತೆ ಕ್ರಮ ವಹಿಸದೇ ಕಾಯ್ದೆ ಉಲ್ಲಂಘನೆಯಾಗಿರುವ ಹಿನ್ನೆಲೆಯಲ್ಲಿ ಸಂಘದ ಹಿತದೃಷ್ಟಿಯಿಂದ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿ, ಅವರ ನೇತೃತ್ವದಲ್ಲಿ ಸಂಘದಲ್ಲಿನ ನ್ಯೂನತೆಗಳನ್ನು ಸರಿಪಡಿಸಿ, ಸಂಘದ ಆಡಳಿತ ಮಂಡಳಿಗೆ ಚುನಾವಣೆಯನ್ನು ನಡೆಸಿ ನೂತನ ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸುವುದು ಸೂಕ್ತವೆಂದು ಮನಗಂಡು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ.27(ಎ) ರನ್ವಯ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಒ 147 ಸಿಎಸ್‌ಆರ್ 2025

ಬೆಂಗಳೂರು, ದಿನಾಂಕ: 06.01.2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27-ಎ ರನ್ವಯ ಗಂಗಾ ಬ್ಲಾಕ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೆಷನ್ (ನೋಂದಣಿ ಸಂಖ್ಯೆ:150/04-05), ಎನ್‌ಜಿವಿ, ಕೋರಮಂಗಲ, ಬೆಂಗಳೂರು, ಈ ಸಂಘಕ್ಕೆ ಶ್ರೀ ಹಮೀದುಲ್ಲಾಖಾನ್, ಮಾರಾಟಾಧಿಕಾರಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, 3ನೇ ವಲಯ, ಬೆಂಗಳೂರು ನಗರ ಜಿಲ್ಲೆ, ಇವರನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಮುಂದಿನ 06 ತಿಂಗಳ ಅವಧಿಗೆ ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಸಂಘದ ಪ್ರಭಾರವನ್ನು ವಹಿಸಿಕೊಂಡು, ಸಂಘದಲ್ಲಿನ ನ್ಯೂನತೆಗಳನ್ನು ನಿಯಮಾನುಸಾರ ಸರಿಪಡಿಸಿ, ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-21

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಮೈಸೂರು ದೇಶ ವಹ್ನಿಕುಲ ಕ್ಷತ್ರಿಯ(ತಿಗಳ) ಸಂಘ, ಬೆಂಗಳೂರು ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ :- ಸಹಕಾರ ಸಂಘಗಳ ನಿಬಂಧಕರ ಪತ್ರ ಸಂ.:ಆರ್‌ಸಿಎಸ್/ಸಂಘ-ಸಂಸ್ಥೆ-02/44/2025-26, ದಿನಾಂಕ:28.11.2025.

*****

ಪ್ರಸ್ತಾವನೆ:

ಮೇಲೆ ಓದಲಾದ (1) ರ ಪತ್ರದಲ್ಲಿ ಮೈಸೂರು ದೇಶದ ವಹ್ನಿಕುಲ ಕ್ಷತ್ರಿಯ(ತಿಗಳ) ಸಂಘ, (ನೋಂ.ಸಂ.:120/1924) ನಂ.28/1, 1ನೇ ಕ್ರಾಸ್, ಶ್ರೀ ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು-27 ಈ ಈ ಸಂಘಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:25209/2015 ಮತ್ತು 16524/2015ರ ದಿನಾಂಕ:10.03.2025ರ ಆದೇಶದಲ್ಲಿ ಸಂಘದ ಸದಸ್ಯರನ್ನು ನೋಂದಾಯಿಸಿಕೊಳ್ಳಲು ಮತ್ತು ಚುನಾವಣೆಯನ್ನು ನಡೆಸಲು ವಿವರವಾದ ಕಾರ್ಯಸೂಚಿಯನ್ನು ನೀಡಿ ಜಿಲ್ಲಾ ನೊಂದಣಾಧಿಕಾರಿಗಳಿಗೆ ನಿರ್ದೇಶನ ನೀಡಿರುತ್ತದೆ. ಸದರಿ ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಹಾಲಿ ಇರುವ ಆಡಳಿತ ಮಂಡಳಿಯನ್ನು ಮುಂದುವರೆಸುವಂತೆ ಸೂಚಿಸಿರುತ್ತದೆ. ಸದರಿ ಆದೇಶದಂತೆ, ಚುನಾವಣಾ ಸಂಬಂಧ ದಾಖಲಾತಿಗಳನ್ನು ಸಲ್ಲಿಸಲು ಸಂಘದ ಅಧ್ಯಕ್ಷ/ಕಾರ್ಯದರ್ಶಿಯವರಿಗೆ ಜಿಲ್ಲಾ ನೋಂದಣಾಧಿಕಾರಿಗಳು ಸೂಚಿಸಿದ್ದು, ಅದರಂತೆ ಶ್ರೀ ಕೆ. ಲಕ್ಷ್ಮಣ್ ಎಂಬುವರು ತಾವೇ ಸಂಘದ ಅಧ್ಯಕ್ಷರು ಎಂಬುದಾಗಿ ತಿಳಿಸಿ ಸಂಘದ ಬೈಲಾ ಪ್ರತಿ, ಸದಸ್ಯತ್ವ ಪಟ್ಟಿ ಮತ್ತು ಬ್ಯಾಂಕ್ ಪಾಸ್ ಬುಕ್ ದಾಖಲಾತಿಗಳನ್ನು ಸಲ್ಲಿಸಿ ಸಂಘದ ಚುನಾವಣೆಗೆ ಅವಕಾಶ ಮಾಡಿಕೊಡಲು ಕೋರಿದ್ದರಿಂದ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಸಂಘದ ಸದಸ್ಯತ್ವ ಪಡೆಯಲು ದಿನಾಂಕ:11.05.2025 ರಿಂದ 12.06.2025 ರವರೆಗೆ ಜಿಲ್ಲಾ ನೋಂದಣಾಧಿಕಾರಿಗಳು ಅವಕಾಶ ನೀಡಿರುತ್ತಾರೆ. ಶ್ರೀ ಕೆ. ಲಕ್ಷ್ಮಣ್ ರವರು ಸಂಘದ ಸ್ವಯಂ ಘೋಷಿತ ಅಧ್ಯಕ್ಷರಾಗಿದ್ದು, ಇವರು ಸಂಘದ ಹಾಲಿ ಅಡಳಿತ ಮಂಡಳಿ ಅಲ್ಲವೆಂಬ ದೂರು ಅರ್ಜಿಯಂತೆ ವಿವರಣೆ ಹಾಗೂ ದಾಖಲಾತಿಗಳನ್ನು ಸಲ್ಲಿಸಲು ಶ್ರೀ ಲಕ್ಷಣ್ ರವರಿಗೆ ಜಿಲ್ಲಾ ನೋಂದಣಾಧಿಕಾರಿಗಳು

ಸೂಚಿಸಿದ್ದರೂ ಸದರಿಯವರು ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಪಾರದರ್ಶಕ ಸದಸ್ಯತ್ವದ ಅಗತ್ಯವನ್ನು ಮನಗಂಡು ಶ್ರೀ ಪವನ್ ಕುಮಾರ್.ಎಸ್. ಸಹಕಾರ ಅಭಿವೃದ್ಧಿ ಅಧಿಕಾರಿ ಇವರನ್ನು ಸಂಘದ ಸದಸ್ಯತ್ವ ಮೇಲ್ವಿಚಾರಕರಾಗಿ ನೇಮಿಸಿ ಆದೇಶಿಸಿ, ದಿನಾಂಕ:09.06.2025 ರಿಂದ 09.07.2025ರವರೆಗೆ ಅವಕಾಶ ನೀಡಿದ್ದು, ಅದರಂತೆ, ಸದರಿಯವರು ಸದಸ್ಯತ್ವ ಅರ್ಜಿಗಳನ್ನು ಪಡೆದು ಜಿಲ್ಲಾ ನೋಂದಣಾಧಿಕಾರಿಗಳಿಗೆ ವರದಿಯನ್ನು ಸಲ್ಲಿಸಿರುತ್ತಾರೆ. ಈ ಮಧ್ಯೆ ಸಂಘದ ಸದಸ್ಯತ್ವ ಮತ್ತು ಚುನಾವಣೆಯನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ರಿಟ್ ಆಪೀಲು ಸಂಖ್ಯೆ : 1219/2025 ಮತ್ತು 1218/2025ರ ಪ್ರಕರಣಗಳ ದಿನಾಂಕ:14.08.2025 ಮತ್ತು 04.09.2025ರಂದು ವಿಚಾರಣೆ ಸಮಯದಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲು ಅರ್ಹ ಪ್ರಕರಣವೆಂದು ಮೌಖಿಕವಾಗಿ ತಿಳಿಸಿರುವುದಾಗಿ ಸರ್ಕಾರಿ ವಕೀಲರು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವುದು ಸೂಕ್ತವೆಂದು ಜಿಲ್ಲಾ ನೋಂದಣಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, 2ನೇ ವಲಯ, ಬೆಂಗಳೂರು ನಗರ ಜಿಲ್ಲೆ, ಇವರು ಮಾಡಿರುವ ಶಿಫಾರಸ್ಸನ್ನು ಪರಿಗಣಿಸಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 27ಎ ರನ್ವಯ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಪ್ರಸ್ತಾವನೆಯನ್ನು ಸಹಕಾರ ಸಂಘಗಳ ನಿಬಂಧಕರು ಸಲ್ಲಿಸಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವನೆ ಮತ್ತು ಜಿಲ್ಲಾ ನೋಂದಣಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, 2ನೇ ವಲಯ, ಬೆಂಗಳೂರು ನಗರ ಜಿಲ್ಲೆ, ಇವರು ಮಾಡಿರುವ ಶಿಫಾರಸ್ಸನ್ನು ಪರಿಶೀಲಿಸಲಾಗಿ, ಸಂಘದಲ್ಲಿ ನೈಜ ಆಡಳಿತ ಮಂಡಳಿ ಅಸ್ತಿತ್ವದಲ್ಲಿ ಇಲ್ಲದ ಕಾರಣ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:25209/2015 C/w.16524/2015ರ ದಿನಾಂಕ:10.03.2025ರ ಆದೇಶವನ್ನು ಅನುಪಾಲಿಸಿ, ಸಂಘದ ಚುನಾವಣೆಯನ್ನು ನಡೆಸುವ ನಿಟ್ಟಿನಲ್ಲಿ ಮತ್ತು ಸಂಘದ ದೈನಂದಿನ ಆಡಳಿತದ ಹಿತದೃಷ್ಟಿಯಿಂದ ಮೈಸೂರು ದೇಶದ ವಹ್ನಿಕುಲ ಕ್ಷತ್ರಿಯ(ತಿಗಳ) ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿ, ಅವರ ನೇತೃತ್ವದಲ್ಲಿ ಸಂಘದ ಬೈಲಾ ರೀತ್ಯ ಚುನಾವಣೆ ನಡೆಸಿ, ನೂತನ ಚುನಾಯಿತ ಆಡಳಿತ ಮಂಡಳಿಗೆ ಪ್ರಭಾರವನ್ನು ಹಸ್ತಾಂತರಿಸುವುದು ಸೂಕ್ತವೆಂದು ಮನಗಂಡು, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ, 1960ರ ಕಲಂ.27(ಎ) ರನ್ವಯ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಒ 206 ಸಿಎಸ್‌ಆರ್ 2025

ಬೆಂಗಳೂರು, ದಿನಾಂಕ: 06.01.2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ.27-ಎ ರನ್ವಯ ಮೈಸೂರು ದೇಶದ ವಹ್ನಿಕುಲ ಕ್ಷತ್ರಿಯ(ತಿಗಳ) ಸಂಘ, (ನೋಂ.ಸಂ.:120/1924) ನಂ.28/1, 1ನೇ ಕ್ರಾಸ್, ಶ್ರೀ ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು-27, ಈ ಸಂಘಕ್ಕೆ ಶ್ರೀ ಸೋಮಶೇಖರ್, ಸಹಕಾರ ಅಭಿವೃದ್ಧಿ ಅಧಿಕಾರಿ, ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ, 1ನೇ ವಲಯ, ಬೆಂಗಳೂರು ನಗರ ಜಿಲ್ಲೆ, ಇವರನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಮುಂದಿನ 06 ತಿಂಗಳ ಅವಧಿಗೆ ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಸಂಘದ ಪ್ರಭಾರವನ್ನು ವಹಿಸಿಕೊಂಡು, ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಸಂಘದ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-22

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಭದ್ರಾವತಿ ತಮಿಳ್ ಸಂಘಂ, ತರಿಕೆರೆ ರೋಡ್, ಓಲ್ಡ್ ಟೌನ್, ಭದ್ರಾವತಿ ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ :- 1) ಸಹಕಾರ ಸಂಘಗಳ ನಿಬಂಧಕರ ಪತ್ರ ಸಂ.:ಆರ್.ಸಿ.ಎಸ್.::ಐಸಿಡಿಪಿ:ಸಂ.ಸಂ.-04:ಆನೇ:87:2024-25, ದಿನಾಂಕ: 12.11.2024.
2) ಸರ್ಕಾರದ ನೋಟೀಸ್ ಸಂ:ಸಿಒ 277 ಸಿ.ಎಸ್.ಆರ್ 2024, ದಿನಾಂಕ: 30.11.2024.
3) ಅಧ್ಯಕ್ಷರು/ಕಾರ್ಯದರ್ಶಿ/ಖಜಾಂಚಿ, ಭದ್ರಾವತಿ ತಮಿಳ್ ಸಂಘಂ, ಭದ್ರಾವತಿ ಇವರ ಲಿಖಿತ ಹೇಳಿಕೆ ದಿನಾಂಕ: 12.12.2024 ಮತ್ತು 30.10.2025.
4) ಸಹಕಾರ ಸಂಘಗಳ ಉಪ ನಿಬಂಧಕರು, ಶಿವಮೊಗ್ಗ ಜಿಲ್ಲೆ ಇವರ ಪತ್ರ ಸಂಖ್ಯೆ:ಡಿಆರ್ಎಸ್/ಎಸ್ಒಆರ್/ದೂಅ/ಸಿಆರ್-15/2024-25/824, ದಿನಾಂಕ:18.10.2025.

*****

ಪ್ರಸ್ತಾವನೆ:

ಮೇಲೆ ಓದಲಾದ (1) ರ ಪತ್ರದಲ್ಲಿ ಭದ್ರಾವತಿ ತಮಿಳ್ ಸಂಘಂ, ತರೀಕೆರೆ ರೋಡ್, ಓಲ್ಡ್ ಟೌನ್, ಭದ್ರಾವತಿ ಈ ಸಂಘದ ವಿರುದ್ಧ ದೂರು ಅರ್ಜಿಯ ವಿಚಾರಣೆ ವರದಿಯಲ್ಲಿ ಸಂಘವು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ11(1), 11(2) ರ ರೀತ್ಯಾ 2018-19ನೇ ಸಾಲಿನಿಂದ ಸತತವಾಗಿ 6 ವರ್ಷಗಳಿಂದ ಯಾವುದೇ ವಾರ್ಷಿಕ ಮಹಾಸಭೆಯನ್ನು ಜರುಗಿಸಿರುವುದಿಲ್ಲ, ಕಾಯ್ದೆ ಕಲಂ.13ರನ್ವಯ ವಾರ್ಷಿಕ ದಾಖಲೆಗಳನ್ನು ಸಲ್ಲಿಸಿ ಸ್ವೀಕೃತಿ ಪಡೆದಿರುವುದಿಲ್ಲ, ಸಂಘದ ಬೈಲಾ ರೀತ್ಯ 05 ವರ್ಷಕ್ಕೊಮ್ಮೆ ಚುನಾವಣೆ ಜರುಗಿಸಿ ನೂತನ ಆಡಳಿತ ಮಂಡಳಿ ರಚನೆಗೆ ಕ್ರಮವಿಡದೇ ಅವಧಿ ಮುಕ್ತಾಯವಾಗಿದ್ದರೂ ಮುಂದುವರೆದು ಕಾಯ್ದೆ ಮತ್ತು ನಿಯಮಗಳನ್ನು ಉಲ್ಲಂಘಿಸಿರುವುದರಿಂದ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲು ಸಹಕಾರ ಸಂಘಗಳ ಉಪ ನಿಬಂಧಕರು, ಶಿವಮೊಗ್ಗ ಜಿಲ್ಲೆ ಇವರ ಶಿಫಾರಸ್ಸನ್ನು ಪರಿಗಣಿಸಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 27ಎ ರನ್ವಯ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಪ್ರಸ್ತಾವನೆಯನ್ನು ಸಹಕಾರ ಸಂಘಗಳ ನಿಬಂಧಕರು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2)ರಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ಏಕೆ ನೇಮಕ ಮಾಡಬಾರದೆಂದು ಲಿಖಿತ ಹೇಳಿಕೆ ಸಲ್ಲಿಸಲು ಅಧ್ಯಕ್ಷರು/ಕಾರ್ಯದರ್ಶಿಯವರಿಗೆ ತಿಳಿಸಲಾಗಿತ್ತು.

ಮೇಲೆ ಓದಲಾದ (3)ರ ದಿನಾಂಕ:12.12.2024ರ ಲಿಖಿತ ಹೇಳಿಕೆಯಲ್ಲಿ, ಸಂಘದ 1650 ಸದಸ್ಯರುಗಳಿಗೆ ದಿನಾಂಕ:10.10.2024 ರಂದು ಮಹಾ ಸಭೆಯನ್ನು ನಡೆಸುವುದಾಗಿ ಅಂಚೆ ಮೂಲಕ ಮಹಾಸಭೆಯ ಪುಸ್ತಕಗಳನ್ನು ರವಾನಿಸಿದ್ದು, ಆದರೆ ಆ ದಿನ ಸದರಿ ಸಭೆಗೆ ಕೇವಲ 77 ಸದಸ್ಯರುಗಳು ಮಾತ್ರ ಹಾಜರಿದ್ದರು. ತಮಿಳು ಸಂಘದ ಪ್ರಕಾರ ಕೋರಂ ಇಲ್ಲದ ಕಾರಣ ಮಹಾಸಭೆಯನ್ನು ಮುಂದೂಡಲಾಯಿತು. ಅಂದಿನ ಸಭೆಯಲ್ಲಿ ತೀರ್ಮಾನವಾದ ವಿಷಯಗಳನ್ನು ಶಿವಮೊಗ್ಗ ಸಂಘಗಳ ನೋಂದಣಾಧಿಕಾರಿಗಳಿಗೆ ದಿನಾಂಕ:13.11.2024 ರಂದು ಪತ್ರ ಮುಖಾಂತರ ಸಲ್ಲಿಸಿರುವುದಾಗಿ ತಿಳಿಸಿ, ಸಂಘಕ್ಕೆ 90 ದಿನಗಳ ಕಾಲಾವಕಾಶವನ್ನು ನೀಡಿದಲ್ಲಿ ಸಂಘದ 05 ವರ್ಷಗಳ ಲೆಕ್ಕಪತ್ರಗಳನ್ನು ಮಹಾ ಸಭೆಯ ಒಪ್ಪಿಗೆ ಪಡೆದು ಜಿಲ್ಲಾ ನೋಂದಣಾಧಿಕಾರಿಗಳಿಗೆ ಸಲ್ಲಿಸಿ, ಸಂಘವನ್ನು ನವೀಕರಿಸಿ ಕೊಂಡು, ಸಂಘದ ಚುನಾವಣೆಯನ್ನು ನಡೆಸುತ್ತೇವೆಂದು ತಿಳಿಸಿರುತ್ತಾರೆ. ನಂತರದ ದಿನಾಂಕ:30.10.2025ರ ಪತ್ರದಲ್ಲಿ ಸಂಘವು 2018-19ರಿಂದ 2022-23ರ ವರೆಗಿನ ಲೆಕ್ಕಪತ್ರಗಳ ಲೆಕ್ಕಪರಿಶೋಧಿತ ವರದಿಯನ್ನು ಇಲಾಖೆಗೆ ಸಲ್ಲಿಸಿದ್ದು, ಅದರಂತೆ ಹಿಂಬರಹವನ್ನು ಸಹ ನೀಡಲಾಗಿದೆ. ಸಂಘವು ಈಗಾಗಲೇ ನೂತನ ಅಡಳಿತ ಮಂಡಳಿಯ ಚುನಾವಣೆಯನ್ನು ಘೋಷಿಸಿದ್ದು, ಇಲಾಖೆಯು ಸಲ್ಲಿಸಿರುವ ಪ್ರಸ್ತಾವನೆಯ ಕಾರಣ ಚುನಾವಣೆಯು ಮಧ್ಯದಲ್ಲಿಯೇ ನಿಂತು ಹೋಗಿರುತ್ತದೆ. ಇದರಿಂದ ಸಂಘದ ಆರ್ಥಿಕ ಕಾರ್ಯ ಹಾಗೂ ದೈನಂದಿನ ಚಟುವಟಿಕೆಗಳಿಗೆ ಹಾಗೂ ಸದಸ್ಯರ ಕುಂದುಕೊರತೆಗಳಿಗೆ ಸ್ಪಂಧಿಸಲು ತೊಂದರೆಯುಂಟಾಗಿರುವ ಕಾರಣ ನಿಬಂಧಕರ ಪ್ರಸ್ತಾವನೆಯನ್ನು ಹಿಂಪಡೆಯಲು/ರದ್ದುಪಡಿಸಲು ಕೋರಿರುತ್ತಾರೆ.

ಮೇಲೆ ಓದಲಾದ (4) ಪತ್ರಗಳಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಕುರಿತು ಸ್ಪಷ್ಟ ಅಭಿಪ್ರಾಯವನ್ನು ಸಲ್ಲಿಸಿರುತ್ತಾರೆ. ಸದರಿ ಅಭಿಪ್ರಾಯದಲ್ಲಿ ಸಂಘವು 2018-19 ರಿಂದ ತಹಲ್‌ವರೆವಿಗೂ ಯಾವುದೇ ವಾರ್ಷಿಕ ಮಹಾಸಭೆ ನಡೆಸದೆ, ಒಂದೇ ಕಾರ್ಯಕಾರಿ ಮಂಡಳಿಯು 05 ವರ್ಷಗಳ ಅವಧಿ ಮುಕ್ತಾಯವಾದರೂ ಸಹ ಯಾವುದೇ ಚುನಾವಣೆಗೆ ಕ್ರಮವಿಡದ ಕಾರಣ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಕ ಮಾಡಲು ಈ ಹಿಂದೆ ಶಿಫಾರಸ್ಸು ಮಾಡಲಾಗಿತ್ತು, ಸಂಘದ ಅಧ್ಯಕ್ಷರು/ಕಾರ್ಯದರ್ಶಿಯವರು ಚುನಾವಣೆ ಹಾಗೂ ಮಹಾಸಭೆ ನಡೆಸಲು 90 ದಿನಗಳ ಕಾಲಾವಕಾಶ ಕೋರಿ ಸರ್ಕಾರಕ್ಕೆ ಮತ್ತು ಉಪ ನಿಬಂಧಕರಿಗೆ ಪತ್ರ ಬರೆದಿದ್ದು, ಚುನಾವಣೆ ಹಾಗೂ ಮಹಾಸಭೆ ನಡೆಸಲು ಅನುಮತಿ ನೀಡುವ ಅಧಿಕಾರ ಉಪ ನಿಬಂಧಕರ ಕಾರ್ಯವ್ಯಾಪ್ತಿಗೆ ಒಳಪಡದ ಕಾರಣ ಯಾವುದೇ ಅನುಮತಿ ನೀಡಿರುವುದಿಲ್ಲವೆಂದು, ಸಂಘದ ಚುನಾವಣೆ ನಡೆಸದಂತೆ ಮಾನ್ಯ ಪ್ರಾಥಮಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಭದ್ರಾವತಿ ನ್ಯಾಯಾಲಯವು ಓ.ಎಸ್ ಸಂಖ್ಯೆ:128/2025 ರಲ್ಲಿ ತಡೆಯಾಜ್ಞೆ ಇರುತ್ತದೆ. ಆದುದರಿಂದ ಸಂಘದಲ್ಲಿ ಯಾವುದೇ ಚುನಾವಣೆ ಜರುಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮುಂದುವರೆದು, ಸಂಘದ ಚುನಾವಣೆಯನ್ನು ಬೈಲಾ ರೀತ್ಯಾ 05 ವರ್ಷಕ್ಕೊಮ್ಮೆ ಅವಿರೋಧವಾಗಿ ಅಥವಾ ಚುನಾವಣೆ ಮುಖಾಂತರವಾಗಿ ಆಯ್ಕೆ ಮಾಡಿಕೊಳ್ಳಬೇಕಿದ್ದು, ಆದರೆ, ಸತತ 6 ವರ್ಷಗಳಿಂದ ಯಾವುದೇ ವಾರ್ಷಿಕ ಮಹಾಸಭೆ ಕರೆಯದೇ, ಯಾವುದೇ ಚುನಾವಣೆ ಜರುಗಿಸದೇ ಅವಧಿ ಮುಕ್ತಾಯವಾಗಿದ್ದರೂ

ಕಾರ್ಯಕಾರಿ ಮಂಡಳಿ ಮುಂದುವರೆದಿರುವುದು ಕಾಯಿದೆ ಮತ್ತು ಬೈಲಾ ಉಲ್ಲಂಘನೆಯಾಗಿರುತ್ತದೆ. ಆದುದರಿಂದ ಸಂಘಕ್ಕೆ ಆಡಳಿತಾಧಿಕಾರಿ ನೇಮಕ ಮಾಡುವುದು ಸೂಕ್ತವೆಂದು ಅಭಿಪ್ರಾಯಪಟ್ಟು ವರದಿಯನ್ನು ಸಲ್ಲಿಸಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವನೆ, ಸಂಘದ ಲಿಖಿತ ಸಮಜಾಯಿಷಿ ಮತ್ತು ಉಪ ನಿಬಂಧಕರ ಸ್ಪಷ್ಟ ಅಭಿಪ್ರಾಯವನ್ನು ಪರಿಶೀಲಿಸಲಾಗಿ, ಸಂಘವು **2018-19** ರಿಂದ **2022-23**ರವರೆಗೆ ಮಾತ್ರ ದಾಖಲೆಗಳನ್ನು ಫೈಲಿಂಗ್ ಮಾಡಿದ್ದು, ಇನ್ನುಳಿದ **2023-24** ಮತ್ತು **2024-2025**ರ ದಾಖಲೆಗಳನ್ನು ಪೈಲಿಂಗ್ ಮಾಡದೆ ಕಾಯ್ದೆಯ ಕಲಂ.13ರ ಉಲ್ಲಂಘನೆಯಾಗಿದ್ದು, ಸಂಘದ ವಾರ್ಷಿಕ ಮಹಾ ಸಭೆಯನ್ನು ಕಾಲಕಾಲಕ್ಕೆ ನಡೆಸದೇ ಕಾಯ್ದೆಯ ಕಲಂ.11ರ ಉಲ್ಲಂಘನೆಯಾಗಿದ್ದು ಮತ್ತು ಆಡಳಿತ ಮಂಡಳಿಯ ಅವಧಿ ಮುಕ್ತಾಯಗೊಂಡಿದ್ದರೂ ಸಂಘದ ಬೈಲಾದಂತೆ ಆಡಳಿತ ಮಂಡಳಿಯ ಆಯ್ಕೆ ಮಾಡದೆ, ಅವಧಿ ಮುಗಿದಿರುವ ಆಡಳಿತ ಮಂಡಳಿಯು ಅನಧಿಕೃತವಾಗಿ ಮುಂದುವರೆದಿರುವುದು ಕಾಯಿದೆ ಮತ್ತು ಬೈಲಾ ಉಲ್ಲಂಘನೆಯಾಗಿರುವ ಹಿನ್ನೆಲೆಯಲ್ಲಿ, ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿ, ಅವರ ನೇತೃತ್ವದಲ್ಲಿ ಸಂಘದ ನ್ಯೂನತೆಗಳನ್ನು ಸರಿಪಡಿಸಿ, ಬೈಲಾ ರೀತ್ಯ ಸಂಘದ ನೂತನ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ನೂತನ ಚುನಾಯಿತ ಆಡಳಿತ ಮಂಡಳಿಗೆ ಪ್ರಭಾರವನ್ನು ಹಸ್ತಾಂತರಿಸುವುದು ಸೂಕ್ತವೆಂದು ಮನಗಂಡು ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ **1960** ರ ಕಲಂ **27(ಎ)** ರನ್ವಯ ಆಡಳಿತಾಧಿಕಾರಿಯನ್ನು ನೇಮಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಒ 277 ಸಿಎಸ್‌ಆರ್ 2024

ಬೆಂಗಳೂರು, ದಿನಾಂಕ: 06.01.2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ **1960** ರ ಕಲಂ **27-ಎ** ರನ್ವಯ ಭದ್ರಾವತಿ ತಮಿಳ್ ಸಂಘಂ, ತರೀಕೆರೆ ರೋಡ್, ಓಲ್ಡ್ ಟೌನ್, ಭದ್ರಾವತಿ ಈ ಸಂಘಕ್ಕೆ ತಹಶೀಲ್ದಾರ್, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಮುಂದಿನ 06 ತಿಂಗಳ ಅವಧಿಗೆ ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಸಂಘದ ಪ್ರಭಾರವನ್ನು ವಹಿಸಿಕೊಂಡು, ಸಂಘದಲ್ಲಿನ ನ್ಯೂನತೆಗಳನ್ನು ನಿಯಮಾನುಸಾರ ಸರಿಪಡಿಸಿ, ಸಂಘದ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-23

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

PROCEEDINGS OF GOVERNMENT OF KARNATAKA

Sub: Census 2027 - Constitution of State Level Census Co-ordination Committee(SLCCC) - reg.

Ref: 1. Government Order No: RD 256 TNR 2025, Dated:12.08.2025.
2. D.O Letter No. 01/06/2025-CEN (GEN) dated 12.25 of the Director of Census Operations, Karnataka. Ministry of Home Affairs, Government of India, Bangalore,

*****

Preamble:

In the Government Orders read at (1) above a State Level Census Co-Ordination Committee was Constituted with Chief Secretary to Government of Karnataka as the Chairman with 16 other members.

The Director of Census Operations, Karnataka has in his letter read at (2) above, proposed to include the Chief Commissioner, Greater Bengaluru Authority (GBA), as member of the Committee as this will facilitate smoother coordination and monitoring of Census related work in the Greater Bengaluru Authority.

Accordingly, the following order;

Government Order No: RD 256 TNR 2025, Dated:20.01.2026.

Government is pleased to include the Chief Commissioner, Greater Bengaluru Authority (GBA), as member in the State Level Census Co-Ordination Committee in connection with the work of Census of India 2027, with immediate effect.

By Order and in the name of the
Governor of Karnataka

(NARASIMHAMURTHY G.K.)
Under Secretary to Government,
Revenue Department
(Disaster Management & Services-3)

PR-24

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH